## ಉತ್ತಮ ಧಾರಾವಾಹಿ

ಝೀ ಕನ್ನಡ ಟಿವಿಯಲ್ಲಿ ಮೂಡಿ ಬರುತ್ತಿರುವ 'ಕಮಲಿ' ಧಾರಾವಾಹಿ ಹೆಚ್ಚಿನ ಸಂಗೀತವಿಲ್ಲದೆ, ವೀಕ್ಷಕರನ್ನು ಕಾಯಿಸದೆ ಬಹುಬೇಗ ಮುಂದುವರಿಯುತ್ತಿದೆ. ಕಲಾವಿದರೆಲ್ಲರೂ ಅವರವರ ಪಾತ್ರಕ್ಕೆ ತಕ್ಕಂತೆ ಗುಣಮಟ್ಟ ಕಾಯ್ದುಕೊಂಡಿದ್ದಾರೆ. ನಡುವೆ ಹಾಡು, ಸಂಗೀತ ಇದ್ದಿದ್ದರೆ ಧಾರವಾಹಿಗೆ ಮೆರುಗು ಬರುತ್ತಿತ್ತು.

-ಅಂಚೆ ಸುಬ್ರಹ್ಮಣ್ಯ, ಕೊಪ್ಪ

## ಏಕತಾನತೆ

ಚಂದನದಲ್ಲಿ ಈಗ ಹಲವಾರು ವರ್ಷಗಳಿಂದ 'ಥಟ್ ಅಂತ ಹೇಳಿ' ಚೆನ್ನಾಗಿ ಮೂಡಿಬರುತ್ತಿತ್ತು. ಆದರೆ ಯಾಕೋ ಇತ್ತೀಚೆಗೆ ಏಕತಾನತೆಯಿಂದ ಸೊರಗುತ್ತಿದೆ ಅನ್ನಿಸುತ್ತಿದೆ. ಕಾಲಕ್ಕೆ ತಕ್ಕಂತೆ ಸ್ವಲ್ಪ ಬದಲಾವಣೆಗಳನ್ನು ತಂದು ಇನ್ನೂ ಆಕರ್ಷಣೀಯವಾಗಿ ಮಾಡಿದರೆ ಮತ್ತಷ್ಟು ಜನರನ್ನು ಸೆಳೆಯಬಹುದು. ಇತ್ತೀಚೆಗೆ ಪ್ರಸಾರವಾದ ಕಾರ್ಯಕ್ರಮದಲ್ಲಿ 'ಲೆಕ್ಕ ಮಾಡಿ ಅಂತಿಮ ಉತ್ತರ ನೀಡಿ' ಎನ್ನುವ ಪ್ರಶ್ನೆಗೆ ಒಬ್ಬ ಸ್ಪರ್ಧಿಯು ಸರಿ ಉತ್ತರ ನೀಡಿದ್ದರೂ ಅದನ್ನು ಪರಿಗಣಿಸದೆ ತಪ್ಪೆಂದು ಹೇಳಿ ಮುಂದಿನ ಪ್ರಶ್ನೆಗೆ ಹೋದರು. ಮುಂದೆ ಹೀಗಾಗದಂತೆ ಎಚ್ಚರಿಕೆ ವಹಿಸಿದರೆ ಉತ್ತಮ.

-ವಿ.ವಿಜಯೇಂದ್ರ ರಾವ್, ಬೆಂಗಳೂರು

## ಮನ ಸೆಳೆವ ಹೊಸ ಧಾರಾವಾಹಿಗಳು

ಕಲರ್ಸ್ ಸೂಪರ್‌ನಲ್ಲಿ ನೂತನ ಧಾರಾವಾಹಿಗಳ ಸರಮಾಲೆ ಪ್ರಾರಂಭವಾಗಿದೆ. ಖ್ಯಾತ ನಿರ್ದೇಶಕ ಟಿ.ಎನ್. ಸೀತಾರಾಂ ಅವರ ಹೊಸ ಧಾರಾವಾಹಿ 'ಮಗಳು ಜಾನಕಿ'ಯ ಪ್ರಸಾರ ಇದೇ ಜೂನ್ 25ರಂದು ಆರಂಭವಾಗಿದೆ. ಈಗಾಗಲೇ ಆರಂಭವಾಗಿರುವ 'ವೀಣಾಪಾಣಿ' ಭಕ್ತಿ ಪ್ರಧಾನವಾದ ಕಥೆಯಾಗಿ ಪ್ರಸಾರವಾಗುತ್ತಿದೆ. ಹಾಗೆಯೇ 32 ಸದಸ್ಯರಿರುವ ಮೂರು ಪೀಳಿಗೆಯ ಅವಿಭಕ್ತ ಕುಟುಂಬದ ಕಥೆ 'ಮನೆಯೇ ಮಂತ್ರಾಲಯ' ಮನ ಸೆಳೆದಿದೆ. ಕುಟುಂಬದ ಆಧಾರ ಸ್ತಂಭ, ಮನೆಯ ಮುಖ್ಯಸ್ಥ ಜಗನ್ನಾಥರಾಯರು, ಅವರ ನಡೆ–ನುಡಿ, ಗಾಂಭೀರ್ಯ, ಮಾತು ಮನಸೂರೆಗೊಂಡಿದೆ. ಮನೆ ಹಾಳು ಮಾಡುವ ಲೇಡಿ ವಿಲನ್, ದೆವ್ವ, ಹಾವಿನ ದ್ವೇಷ ಇತ್ಯಾದಿ ಕಥಾಹಂದರದ ಏಕತಾನತೆಯ ಧಾರಾವಾಹಿಗಳನ್ನು ನೋಡಿ ಬೇಸತ್ತಿದ್ದ ವೀಕ್ಷಕರಿಗೆ ಈ ಹೊಸ ಧಾರಾವಾಹಿಗಳು ಮನಸ್ಸಿಗೆ ತಂಪೆರೆದಿವೆ.

-ಮಧುರ ಸುಬ್ರಹ್ಮಣ್ಯ, ಬೆಂಗಳೂರು

**ವಾರದ ಪತ್ರ**

## ಶಬ್ದಶಃ ಅನುವಾದ ಏಕೆ?

ಕನ್ನಡದಲ್ಲಿ ಪೌರಾಣಿಕ ಭಾಷೆಗೆ ಒಂದು ವಿಶಿಷ್ಟ ಸೊಗಡಿದೆ. ಆದರೆ ಅದನ್ನು ತಿಳಿಯದೆ ಧಾರಾವಾಹಿಗಳಲ್ಲಿ ಶಬ್ದಶಃ ಹಿಂದಿಯಿಂದ ಅನುವಾದ ಮಾಡುವವರು ಅದಕ್ಕೆ ಕೇಡು ತರುತ್ತಿದ್ದಾರೆ. ನಮ್ಮಲ್ಲಿ ದೇವಾನು ದೇವತೆಗಳನ್ನು ಏಕವಚನದಲ್ಲಿ ಕರೆಯುವುದು ಅಗೌರವ ಸೂಚಕವಲ್ಲ. ಅದು ಆತ್ಮೀಯತೆಯ ಸಂಕೇತ. ಅದನ್ನು ಬಿಟ್ಟು ನೀವು– ತಾವು ಎನ್ನುವುದು ಕೇಳಲು ಕಿರಿಕಿರಿ. ಹಾಗೆಂದು ರಾಘವೇಂದ್ರ ಸ್ವಾಮಿ ಮತ್ತಿತರ ಸಂತರನ್ನು ಏಕವಚನದಲ್ಲಿ ಕರೆಯುವಂತಿಲ್ಲ. ಹೇಗೆ ನಾವು ಪಂಪನನ್ನು ಅವನು ಎಂದರೂ ಕುವೆಂಪುರನ್ನು ಅವರು ಎನ್ನುತ್ತೇವೆಯೋ ಇದೂ ಹಾಗೆಯೇ. ಇದಕ್ಕೆ ಕಾರಣಗಳನ್ನು ಬೇರೆ ವೇದಿಕೆಯಲ್ಲಿ ಚರ್ಚಿಸಬಹುದು.

ಇದಕ್ಕೂ ಮೀರಿ ಇನ್ನೊಂದು ಅಪಚಾರವೆಂದರೆ ಕನ್ನಡದಲ್ಲಿ ಇರದ 'ಅಸ್ಮಿ' ಎಂಬ ಕ್ರಿಯಾಪದವನ್ನು ತುರುಕುವುದು. 'ನಾನು ದಕ್ಷ' ಎನ್ನುವ ಬದಲು ಹಿಂದಿಯಂತೆ 'ನಾನು ದಕ್ಷನಿದ್ದೇನೆ' ಎಂದರೆ ವಿಚಿತ್ರವಾಗಿ ಕೇಳಿಸುತ್ತದೆ. ಇಂತಹ ಅಪಚಾರ ಜಾಹೀರಾತುಗಳಲ್ಲೂ ನಡೆಯುತ್ತಲೇ ಇದೆ. ಭಾಷೆ ಬಾರದವರು ಅನುವಾದ ಅಥವಾ ರಚನೆ ಮಾಡಿದರೆ ಹೀಗೇ ಆಗುವುದು.

-ವಿನಯ್ ಎಂ.ಎಸ್., ಬೆಂಗಳೂರು

## ಅಡಚಣೆ ನಿಲ್ಲಲಿ..

ಝೀ ಕನ್ನಡ ವಾಹಿನಿಯಲ್ಲಿ 'ಡಿಕೆಡಿ ಲಿಟ್ಲ್ ಚಾಂಪ್ಸ್' ಅದ್ಭುತವಾಗಿ ಮೂಡಿ ಬರುತ್ತಿದೆ. ಚಿಣ್ಣರು ತಮ್ಮ ಸಾಮರ್ಥ್ಯವನ್ನೂ ಮೀರಿ ಪ್ರದರ್ಶನ ನೀಡುತ್ತಿದ್ದಾರೆ. ಆದರೆ ಪ್ರಸಾರದ ಮಧ್ಯೆ ತೀರ್ಪುಗಾರರು ಅಥವಾ ಇನ್ಯಾರನ್ನೋ ತೋರಿಸುವುದರಿಂದ ಪೂರ್ಣ ಪ್ರಮಾಣದಲ್ಲಿ ಆಸ್ವಾದಿಸುವುದು ಸಾಧ್ಯವಾಗುತ್ತಿಲ್ಲ. ಇದು ನಿಲ್ಲಲಿ.

–ಕೆ.ಎನ್.ಪ್ರಭಾಕರ ಗುಪ್ತ, ಹಾಸನ

## ಇಂಗ್ಲೆಂಡ್ ಚರಿತ್ರೆ ಪ್ರಸಾರ

ಇಂಗ್ಲೆಂಡಿನ ಚರಿತ್ರೆ ಮತ್ತು ಪ್ರಾಕೃತಿಕ ಸೌಂದರ್ಯವನ್ನು 'ಸುದ್ದಿ' ವಾಹಿನಿಯು ಬಿತ್ತರಿಸಿತು. ಅದರಲ್ಲಿ ಲಂಡನ್ನಿನ ಪ್ರೇಕ್ಷಣೀಯ ಸ್ಥಳಗಳ ಜೊತೆಗೆ ವಿಕ್ಟೋರಿಯಾ ರಾಣಿಯ ಆಡಳಿತ ವ್ಯವಸ್ಥೆಯ ವಿವರಣೆಯನ್ನು ನೀಡಿದರು. ಜೊತೆಗೆ ಪ್ರಸ್ತುತ ಆಡಳಿತ ವ್ಯವಸ್ಥೆಯನ್ನೂ ಸಚಿತ್ರವಾಗಿ ಕಟ್ಟಿಕೊಟ್ಟಿದ್ದು ಆಪ್ಯಾಯಮಾನವಾಗಿತ್ತು. ಥೇಮ್ಸ್ ನದಿ, ಹ್ಯಾಂಗಿಂಗ್ ಬ್ರಿಜ್, ರಾಣಿಯ ಅರಮನೆ, ಸಂಸತ್ ಭವನದ ಚಿತ್ರಗಳು ರೋಚಕವಾಗಿದ್ದವು. ಕೊನೆಗೆ ಆಹಾರ ವೈವಿಧ್ಯವನ್ನೂ ತಿಳಿಸಿಕೊಡಲಾಯಿತು. ಅಲ್ಲಿನ ಬೀದಿ, ಬಹುಮಹಡಿ ಕಟ್ಟಡಗಳ ವಿನ್ಯಾಸ ಭಾರತದ ನಗರಗಳಂತೆಯೇ ಕಾಣಿಸಿದವು.

–ಲಲಿತಾ ಅಂಬಾಗಿಲು, ಉಪ್ಪುಂದ

## ಮತ್ತೆ ಕಿರುತೆರೆಯಲ್ಲಿ ಸೀತಾರಾಂ

ಟಿ.ಎನ್.ಸೀತಾರಾಂ ಅವರ 'ಮಗಳು ಜಾನಕಿ' ಧಾರಾವಾಹಿ ಕಲರ್ಸ್ ಸೂಪರ್‌ನಲ್ಲಿ ಪ್ರಸಾರವಾಗುತ್ತದೆ ಎಂದು ತಿಳಿದಾಗ ನಾವು ಕುಣಿದು ಕುಪ್ಪಳಿಸಿದೆವು. ಅವರ ಕಥೆ ತರ್ಕಬದ್ಧವಾಗಿ ನಿರೂಪಣೆಯಾಗುತ್ತದೆ. ಅದು ವೀಕ್ಷಕರ ತಿಳಿವಳಿಕೆಯನ್ನು ವಿಸ್ತರಿಸುವ ಜ್ಞಾನ ಕೇಂದ್ರಿತವಾಗಿರುತ್ತದೆ. ಇದು ಮತ್ತೆ ಬೇರೆ ಯಾವ ಧಾರಾವಾಹಿಯಲ್ಲಿಯೂ ನಮಗೆ ಸಿಕ್ಕಿಲ್ಲ.

ಇದರ ನಂತರ 'ಪಾಪ ಪಾಂಡು' ಮತ್ತೆ ಪ್ರಸಾರವಾಗುತ್ತಿದೆ. ಅದೇ ರೀತಿ 'ಮಾಯಾಮೃಗ' 'ಮನ್ವಂತರ' 'ಮುಕ್ತ' ಧಾರಾವಾಹಿಗಳನ್ನೂ ಮರು ಪ್ರಸಾರ ಮಾಡಬೇಕು ಎನ್ನುವುದು ನಮ್ಮ ಮನವಿ.

–ಸಂತೋಷ ಮತ್ತು ಸಂದೇಶ, ಕಾರವಾರ

## ಅತಿಥಿ ದೇವೋಭವ?

ಭಾರತೀಯ ಸಮಾಜ ತಂದೆ, ತಾಯಿ, ಗುರು ಮತ್ತು ಅತಿಥಿಗಳನ್ನು ದೇವರ ಸಮಾನರು ಎಂದು ಭಾವಿಸಿಕೊಂಡು ಬಂದಿದೆ. ಅತಿಥಿ ಅಭ್ಯಾಗತ ಎಂಬ ಪದವೂ ನಮ್ಮಲ್ಲಿ ಜನಜನಿತವಾಗಿದೆ. ಅತಿಥಿ ಎಂದರೆ ಆಕಸ್ಮಿಕವಾಗಿ ಆಗಮಿಸುವುದು, ಅಭ್ಯಾಗತ ಎಂದರೆ ಬಂಧುಗಳು, ಕೆಲವು ದಿನ ಇದ್ದು ಹೋಗುವವರು ಎನ್ನುವ ಅರ್ಥ ವಿವರಣೆ ಇದೆ.

ಆದರೆ 'ಜೋಡಿಹಕ್ಕಿ' ಧಾರಾಹಿಯಲ್ಲಿ ಸೋನು ಅತಿಥಿಯಾಗಿ ಬಂದು ತುಂಬಾ ದಿನಗಳು ಕಳೆದಿವೆ. ಬಂದ ಮನೆಯಲ್ಲಿ ಅತಿಥಿಯ ಅಂಜಿಕೆ ಇಲ್ಲದೆ ಗಲಾಟೆಯನ್ನು ಎಬ್ಬಿಸಿದ್ದಾಳೆ. ರಾಮು ಮತ್ತು ಜಾನಕಿ ಸಂಸಾರವನ್ನೇ ಹಾಳು ಮಾಡುತ್ತಿದ್ದಾಳೆ. ಇಂತಹ ಕಥೆಯಿಂದ ನಮ್ಮ ಸಮಾಜಕ್ಕೆ ಏನು ಲಾಭ?

–ರುಕ್ಮಿಣಿ ಕೃ.ದೇಶಪಾಂಡೆ, ಗೋಕಾಕ